ಬಿಳೇಕಹಳ್ಳಿಯ ದೇವಾಲಯ ಪ್ರವೇಶದ ಮುಂಚೂಣಿಯಲ್ಲಿದ್ದ ಚಾರಿತ್ರಿಕ ಘಟನೆ ಕೂಡ ನಡೆಯಿತು. ಇವತ್ತು ಮುಖ್ಯ ನಾಯಕರಾಗಿ ಬೆಳೆದಿರುವ ಮಾವಳ್ಳಿ ಶಂಕರ್ ಥರದವರು ಕೂಡ ಮಾವಳ್ಳಿಯ ರಾತ್ರಿಶಾಲೆಯಲ್ಲಿ ಅರಳಿದವರು. ಶಿಕ್ಷಣದ ಮೂಲಕ ಬಡವರ ವಿಮೋಚನೆಯ ಬದ್ಧತೆಯಿಂದ ಸಿದ್ಧಲಿಂಗಯ್ಯನವರ ಗೆಳೆಯರ ತಂಡ ಮಾಡುತ್ತಿದ್ದ ಈ ಶಾಲಾ ಚಟುವಟಿಕೆಯಲ್ಲಿ ಅಂಬೇಡ್ಕರ್ ಅವರ 'ಶಿಕ್ಷಣ, ಸಂಘಟನೆ, ಹೋರಾಟ'ದ ಮೂಲ ಆಶಯಗಳು ಸಹಜವಾಗಿಯೇ ಬೆರೆತಿದ್ದವು. ಮುಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾದ ಸಿದ್ಧಲಿಂಗಯ್ಯನವರು ಅಲ್ಲಿ ಹೆಚ್ಚು ಬೋಧಿಸದಿದ್ದುದು ವಿದ್ಯಾರ್ಥಿ ಸಮುದಾಯಕ್ಕೆ ದೊಡ್ಡ ನಷ್ಟವೇ ಎನ್ನಬೇಕು.

## ದಲಿತ ಚಳವಳಿ - ದಲಿತ ರಾಜಕಾರಣ: ಆಶಯ ಮತ್ತು ಸಾಕಾರ

1974ರಲ್ಲಿ ದಲಿತ ಲೇಖಕ ಕಲಾವಿದರ ಸಂಘ (ದಲೇಕ) ಹುಟ್ಟಿತು; ನಂತರ ದಲೇಕ ವಿಕಾಸಗೊಂಡು ದಲಿತ ಸಂಘರ್ಷ ಸಮಿತಿಯಾಯಿತು; ಪ್ರೊ. ಬಿ. ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಗೋವಿಂದಯ್ಯ, ಶ್ರೀಧರ ಕಲಿವೀರ ಮೊದಲಾದವರು ಇವೆರಡಕ್ಕೂ ತಳಹದಿಯಾಗಿದ್ದರು; ಇಂಥ ಹಲವಾರು ನಾಯಕರು, ಕಾರ್ಯಕರ್ತರು ಕಟ್ಟಿ ಬೆಳೆಸಿದ ದಲಿತ ಚಳವಳಿಯ ಸಭೆಗಳಲ್ಲಿ ಸಿದ್ಧಲಿಂಗಯ್ಯನವರು ಸ್ಟಾರ್ ಭಾಷಣಕಾರರಾದರು. ಚುರುಕಾದ ಪುಟ್ಟ

### ಡಾ. ಸಿದ್ಧಲಿಂಗಯ್ಯ: ಕೃತಿ, ಪ್ರಶಸ್ತಿ

**ಕಾವ್ಯ:**

- ಹೊಲೆಮಾದಿಗರ ಹಾಡು
- ಸಾವಿರಾರು ನದಿಗಳು
- ಕಪ್ಪು ಕಾಡಿನ ಹಾಡು
- ಕುದಿವ ನೀಲಿಯ ಕಡಲು
- ಊರು ಸಾಗರವಾಗಿ
- ಬೋಧಿವೃಕ್ಷದ ಕೆಳಗೆ (ಸಮಗ್ರ ಕಾವ್ಯ – 2021)

**ನಾಟಕ:**

● ಪಂಚಮ ● ನೆಲಸಮ ● ಏಕಲವ್ಯ

**ಸಂಶೋಧನೆ:**

● ಗ್ರಾಮದೇವತೆಗಳು

**ಪ್ರಬಂಧ:**

● ಅವತಾರಗಳು ● ಜನಸಂಸ್ಕೃತಿ

**ವಿಮರ್ಶೆ:**

● ಹಕ್ಕಿನೋಟ ● ಉರಿಕಂಡಾಯ

**ಆತ್ಮಕಥನ:**

● ಊರುಕೇರಿ ಭಾಗ – 1, 2, 3

**ಭಾಷಣಗಳು:**

● ಸದನದಲ್ಲಿ ಸಿದ್ಧಲಿಂಗಯ್ಯ ಭಾಗ – 1, 2

**ಪ್ರಶಸ್ತಿ**

● ಪಂಪ ಪ್ರಶಸ್ತಿ ● ಡಾ. ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿ ● ಬಾಬೂ ಜಗಜೀವನರಾಂ ಪ್ರಶಸ್ತಿ ● ನೃಪತುಂಗ ಪ್ರಶಸ್ತಿ ● ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ● ನಾಡೋಜ ಗೌರವ